<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

## <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1013 /2021</u>.

ಪ್ರಾ.ಸಾ. : 1

ಚಾ.ಸಾ. : 1

| | | |
|---|---|---|
| ಹೆಸರು | : | ಯೋಗಣ್ಣ ಎನ್ |
| ತಂದೆಯ ಹೆಸರು | : | ಕೆಂಪಚಾರಿ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಖಾಸಗಿ |
| ವಿಳಾಸ | : | ಹೆಚ್. ಡಿ. ಕೋಟೆ |

... ........................................................................................................ ...

ದಿನಾಂಕ 13 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ</u> : -

ಆರೋಪಿ 1 ಮತ್ತು 2 ಪರಿಚಯ. ಚಾಸಾ 2 ರಿಂದ 4 ಪರಿಚಯ. ನಾನು 2021 ರಲ್ಲಿ ಗೋಣಿಕೊಪ್ಪ ಅಪೊಲೋ Formacy ಯಲ್ಲಿ 3 ವರ್ಷ ಕೆಲಸ ಮಾಡಿದ್ದೆ. ಸದರಿ Formacy ಯನ್ನು ಬೆ. 7 ರಿಂದ ರಾತ್ರಿ 10.30 ಗಂಟೆ ತನಕ ತೆಗೆಯಲಾಗಿತ್ತು ಎನ್ನುತ್ತಾರೆ. ನಾವು ಪ್ರತಿದಿನ ವ್ಯಾಪಾರದಿಂದ ಬಂದ ಹಣವನ್ನು ಅಂಗಡಿಯ ಕ್ಯಾಶ್ ಡ್ರಾಯರ್ ನಲ್ಲಿ ಇಡುತ್ತಿದ್ದೆವು ಮರದಿನ ಬ್ಯಾಂಕ್‌ಗೆ ಕಟ್ಟುತ್ತಿದ್ದೆವು. ದಿ. 08.05.2021 ರಂದು ನಾನು ರಾತ್ರಿ ಅಂಗಡಿಯ ಬಾಗಿಲು ಹಾಕಿ ಮನೆಗೆ ಹೋ ೀಗಿರುತ್ತೇನೆ. ಆ ದಿನದ ಹಣ ಒಟ್ಟು 68,000/- ರೂ ಹಣವನ್ನು ಅಂಗಡಿಯ ಕ್ಯಾಶ್ ಡ್ರಾಯರ್ ನಲ್ಲಿ ಇಟ್ಟು ಮನೆಗೆ ಹೋಗಿರುತ್ತೇನೆ. ಮರುದಿನ ಬೆಳಿಗ್ಗೆ ಅಂಗಡಿ ಬಾಗಿಲು ತೆಗೆದಾಗ ಕ್ಯಾಶ್ ಡ್ರಾಯರ್ ನಲ್ಲಿ ಹಣ ಇರಲಿಲ್ಲ. ನಮ್ಮ ಸಿಬ್ಬಂದಿಗೆ ಸದರಿ ವಿಚಾರವನ್ನು ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ. ಅಂಗಡಿಯಲ್ಲಿದ್ದ ಸಿ.ಸಿ. ಕ್ಯಾಮೆರಾವನ್ನು ಪರಿಶೀಲಿಸಿದಾಗ ವಿರುಪಾಕ್ಷ ಮತ್ತು ಮತ್ತೊಬ್ಬರು ದಿನಾಂಕ 09.05.202 ರಂದು ಬೆಳಿಗಿನ ಜಾವ 5 ರಿಂದ 5.30 ರ ವೇಳೆಗೆ ಅಂಗಡಿಗೆ ಬಂದು ಹಣ ಕಳ್ಳತನ ಮಾಡಿರುವುದು ಕಂಡು ಬಂತು. ಆನಂತರ ಗೋಣಿಕೊಪ್ಪ ಪೊ. ಠಾಣೆಗೆ ದೂರು ನೀಡಿದೆವು. ಪೊಲೀಸರು 3 ದಿನದ ನಂತರ ಅಂಗಡಿಗೆ ಬಂದರು. ನಾನು ಹಣ ಇಟ್ಟಿದ್ದ ಸ್ಥಳವನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಪೊಲೀಸರು ಮಹಜರ್ ಮಾಡಿದರು. ಸ್ಥಳದಲ್ಲಿ ಫೋಟೋ ತೆಗೆದರು. ದೂರನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು, ಮಹಜರ್ ನ್ನು ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು, 2 ಫೋಟೋಗಳನ್ನು ನಿ ಪಿ

3 ಮತ್ತು ನಿ ಪಿ 4 ಎಂದು ಗುರುತಿಸಲಾಯಿತು. ಪೆನ್ ಡ್ರೈವ್ ನ್ನು ಮು. ಮಾ 1 ಎಂದು ಗುರುತಿಸಲಾಯಿತು. ಪೆನ್ ಡ್ರೈವ್ ನ್ನು ಲ್ಯಾಪ್ ಟಾಪ್ ಗೆ ಹಾಕಿ ಪ್ಲೆ ಮಾಡಿದ ನಂತರ ಗುರುತಿಸಲಾಯಿತು.

ಪೊಲೀಸರು ನಮಗೆ ದೂರವಾಣಿ ಕರೆ ಮಾಡಿ ಆರೋಪಿತರನ್ನು ಹಿಡಿದಿದ್ದೇವೆ ಎಂದು ತಿಳಿಸಿದರು. ನಾನು ಹೋಗಿ ಆರೋಪಿತರನ್ನು ನೋಡಿರುತ್ತೇನೆ. ಆರೋಪಿತರಿಂದ ಪೊಲೀಸರು ಸ್ವಲ್ಪ ಮೆಡಿಸಿನ್ ಹಾಗೂ ರೂ 31,000/- ಹಣವನ್ನು ಅಮಾನತುಪಡಿಸಿದರು. 4 ಫೋಟೋಗಳನ್ನು ನಿ ಪಿ 5 ಮತ್ತು ನಿ ಪಿ 8 ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ</u> : -

ದಿ. 09.05.2021 ರಂದು ಸಹ ನಾನು ಇಡೀ ದಿನ ವ್ಯಾಪಾರ ಮಾಡಿ ರೂ. 68,000/- ಹಣವನ್ನು ಕ್ಯಾಶ್ ಡ್ರಾಯರ್‌ನಲ್ಲಿ ಇಟ್ಟು ಹೋಗಿದ್ದೇನೆ ಎಂದರೆ ಸರಿ. ಮರುದಿನ ನಾನೇ ಅಂಗಡಿ ಬಾಗಿಲು ತೆಗೆದೆ ಎಂದರೆ ಸರಿ. ಆಗ ಕ್ಯಾಶ್ ಡ್ರಾಯರ್‌ನಲ್ಲಿ ಇದ್ದ ಹಣ ಕಾಣಲಿಲ್ಲ ಎಂದರೆ ಸರಿ. ಸಿ. ಸಿ. ಟಿ. ವಿ ಪರಿಶೀಲಿಸಿದಾಗ ದಿನಾಂಕ 10.05.2021 ರಂದು ಬೆಳಗಿನ ಜಾವ 5 ರಿಂದ 5.30 ರವರ ಸಮಯದಲ್ಲಿ ಒಬ್ಬ ವ್ಯಕ್ತಿ ಆತನ ಬಳಿ ಇದ್ದ ಕೀಯಿಂದ ಅಂಗಡಿ ಬಾಗಿಲನ್ನು ತೆಗೆದು ಆತ ಮತ್ತು ಮತ್ತೊಬ್ಬ ಇಬ್ಬರು ಒಳಗಡೆ ಹೋಗಿ ಹಣ ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಯಿತು ಎಂದರೆ ಸರಿ. ಸದರಿ ವ್ಯಕ್ತಿ ನಮ್ಮ ಅಂಗಡಿಯಲ್ಲಿ ಹಿಂದೆ ಕೆಲಸ ಮಾಡಿದ್ದ ವಿರೂಪಾಕ್ಷ ಎಂದು ನನಗೆ ತಿಳಿಯಿತು ಎಂದರೆ ಸರಿ. ಮೆಡಿಕಲ್ ಶಾಪ್ ನಲ್ಲಿ ಇದ್ದ ಸಿ. ಸಿ. ಕ್ಯಾಮೆರಾ ಮೋಡಮ್, ಇಂಜಕ್ಷನ್ ಹಾಗೂ ಮಾತ್ರೆಗಳನ್ನು ಕಳ್ಳತನ ಮಾಡಿರುವುದು ತಿಳಿಯಿತು ಎಂದೆರ ಸರಿ. ದಿ. 11.05.2021 ರಂದು ಪೊಲೀಸರು ನಮ್ಮ ಅಂಗಡಿಗೆ ಬಂದರು ಎಂದರೆ ಸರಿ. ಪೊಲೀಸರು ಮಹಜರ್ ಮಾಡಿ ಸಿ. ಸಿ. ಕ್ಯಾಮೆರಾ ಫೋಟೋಗಳ ಪೆನ್

ಡ್ರೈವ್ ಪಡೆದರು ಆಗ ನಾನು ಸಹಿ ಹಾಕಿದೆ ಎಂದರೆ ಸರಿ. ಘಟನೆ ನಡೆದು ಹಲವು ದಿನಗಳು ಆದ ಕಾರಣ ಮರೆತಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲು</u> :- ಅರೋಪಿ ಪರ ವಕೀಲರವರಿಂದ :-

ನಾನು ಈಗ ಹೆಚ್ ಡಿ ಕೋಟೆ ಯಲ್ಲಿ ಮೆಡಿಕಲ್ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಅಪೋಲೋ ಮೆಡಿಕಲ್ ಶಾಪ್ ಬಿಟ್ಟು 2 ವರ್ಷ ಆಯಿತು. 2018 ರಲ್ಲಿ ಅಪೋಲೋ ಮೆಡಿಕಲ್ ಶಾಪ್ ಕೆಲಸಕ್ಕೆ ಸೇರಿದ್ದೆ. ಆನಂತರ ವಿರೂಪಾಕ್ಷ ಸದರಿ ಅಂಗಡಿಗೆ ಕೆಲಸಕ್ಕೆ ಸೇರಿರುತ್ತಾರೆ. 6 ತಿಂಗಳ ನಂತರ ವಿರೂಪಾಕ್ಷ ಕೆಲಸ ಬಿಟ್ಟಿರುತ್ತಾರೆ. ವಿರೂಪಾಕ್ಷ ಕೆಲಸಕ್ಕೆ ಸೇರಿದ ದಿನಾಂಕ ನನಗೆ ಗೊತ್ತಿಲ್ಲ. ನಮ್ಮ ಅಂಗಡಿಯಲ್ಲಿ ಘಟನಾ ಸಮಯದಲ್ಲಿ ಪ್ರಭಾರ ಮ್ಯಾನೇಜರ್ ಜಯಶ್ರೀ ಆಗಿದ್ದರು. ಜಯಶ್ರೀ ರವರು ದೂರನ್ನು ನೀಡಿಲ್ಲ ಎಂದರೆ ಸರಿ. ದೂರನ್ನು ಪೊಲೀಸರು ಬರೆದರು. ನಮ್ಮ ಅಂಗಡಿಯಲ್ಲಿ ಎಷ್ಟು ವ್ಯಾಪಾರ ಆಯಿತು ಎಂಬ ಬಗ್ಗೆ ಹಣದ ರಿಜಿಸ್ಟರ್ ಇಟ್ಟಿರುವುದಿಲ್ಲ ಆದರೆ ಹಣವನ್ನು ಲೆಕ್ಕ ಹಾಕಿ ಇಡುತ್ತೇವೆ ಎನ್ನುತ್ತಾರೆ. ಘಟನೆ ನಡೆಯುವ 15 ದಿನದ ಹಿಂದೆ ವಿರೂಪಾಕ್ಷ ಕೆಲಸ ಬಿಟ್ಟಿದ್ದರು. ಅಂಗಡಿಯಿಂದ ವಿರೂಪಾಕ್ಷ ರವರಿಗೆ ಯಾವುದೇ ದಾಖಲಾತಿ ನೀಡಿಲ್ಲ . ಅಪೋಲೋ Formacy ಮುಖ್ಯ ಕಚೇರಿಯಿಂದಲೂ ಯಾವುದೇ ಸೂಚನೆ ಬಂದಿರುವುದಿಲ್ಲ. ಅಂಗಡಿಯ ಎಲ್ಲ ಬೀಗದ ಕೈ ನನ್ನ ಬಳಿಯೇ ಇತ್ತು ಎನ್ನುತ್ತಾರೆ. ಆ ದಿನವೂ ಸಹ ಒಟ್ಟು 4 ಬೀಗದ ಕೀ ಗಳನ್ನು ಮನೆಗೆ ತೆಗೆದುಕೊಂಡು ಹೋಗಿದ್ದೆ. ಬೆಳಿಗ್ಗೆ ನಾನೇ ಅಂಗಡಿ ತೆಗೆಯುವ ಸಲುವಾಗಿ ಅಂಗಡಿ ಕೀ ಗಳು ನನ್ನ ಬಳಿ ಇತ್ತು. ಆದಿನವೂ ಸಹ ನಾನು ಅಂಗಡಿಗೆ ಹೋದಾಗ ಲಾಕ್ ಆಗಿತ್ತು ನಾನೇ ಬಾಗಿಲು ತೆಗೆದಿರುತ್ತೇನೆ.

ಅಂಗಡಿಯ ಬಾಗಿಲನ್ನು ಹೊಡೆದಿರಲಿಲ್ಲ ಹಾಗೂ ಮುರಿದಿರಲಿಲ್ಲ ಎನ್ನುತ್ತಾರೆ. ಅಂಗಡಿಯ ಬಾಗಿಲಿಗೆ ಪ್ರತ್ಯೇಕ ಬೀಗ ಇತ್ತು ಅದನ್ನು ತೆಗೆದೇ ಅಂಗಡಿಗೆ ಹೋಗಿದ್ದಾರೆ. ಅಂಗಡಿಯ ಬೀಗದ ಕೀ ಒಂದು ಸೆಟ್ ಮಾತ್ರ ಇದ್ದು ನನ್ನ ಬಳಿ ಇತ್ತು. ನಾನು ಒಳಗಡೆ ಲಾಕರ್ ಗೂ ಸಹ ಬೀಗ ಹಾಕಿ ಹೋಗಿದ್ದೆ. ದಿ. 09.05.2021 ರಲ್ಲಿ ಅಂಗಡಿ ಬಾಗಿಲು ತೆಗೆದು ಆನಂತರ ಬೆ. 7.30 ಕ್ಕೆ ಗ್ರಾಹಕರು ಬಂದಾಗ ಚಿಲ್ಲರೆ ನೀಡಲು ಕ್ಯಾಶ್ ಡ್ರಾಯರ್ ತೆಗೆದಾಗ ಕಳ್ಳತನ ಆಗಿರುವುದು ತಿಳಿಯಿತು. ನಾನು ಮೊದಲು ಅಂಗಡಿಗೆ ಹೋ ೀಗಿರುತ್ತೇನೆ. ವಿಚಾರವನ್ನು ಜಯಶ್ರೀ ರವರಿಗೆ ತಿಳಿಸಿರುತ್ತೇನೆ. ಪ್ರತಿದಿನ 8 ಗಂಟೆಗೆ ಇತರೆ ಸಿಬ್ಬಂದಿ ಅಂಗಡಿಗೆ ಬರುತ್ತಾರೆ.

ನನಗೆ ಸಿ. ಸಿ. ಕ್ಯಾಮೆರಾವನ್ನು ನೋಡಿದಾಗ ಆ ವ್ಯಕ್ತಿ ವಿರೂಪಾಕ್ಷ ಎಂದು ತಿಳಿಯಿತು. ಸಂಜೆ ನಾವು ಪೊ. ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ನಮ್ಮ ಅಂಗಡಿಯಿಂದ ಪೊ. ಠಾಣೆ 200 ಮೀ ದೂರ ಇದೆ ಎನ್ನುತ್ತಾರೆ. 5 ನಿಮಿಷದಲ್ಲಿ ಪೊ. ಠಾಣೆ ತಲುಪಬಹುದು. ಕಂಪನಿಯಿಂದ ಯಾರಾದರೂ ಬರುತ್ತಾರೆ ಎಂದು ಕಾಯಿದು ಆನಂತರ ದೂರು ನೀಡಿದೆವು ಎನ್ನುತ್ತಾರೆ. ಸಿ. ಸಿ. ಕ್ಯಾಮೆರಾವನ್ನುನೋಡಿದಾಗ ನನಗೆ ವಿರೂಪಾಕ್ಷ ಎಂದು ತಿಳಿಯಲಿಲ್ಲ ಎಜಂದರೆ ಸರಿಯಲ್ಲ. ಪೊಲೀಸರು ನನಗೆ ಯಾರಾದರೆ ಅನುಮಾನ ಇದೆಯೇ ಎಂದು ಕೇಳಿದಾಗ ವಿರೂಪಾಕ್ಷ ಹೆಸರು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ನಂತರ ಪೊ. ಠಾಣೆಯಲ್ಲಿ ವಿರೂಪಾಕ್ಷರವರನ್ನು ನೋಡಿದ್ದೇನೆ ಎನ್ನುತ್ತಾರೆ. 2 ನೇ ಆರೋಪಿಯನ್ನು ಪೊ. ಠಾಣೆಯಲ್ಲಿ ನೋಡಿಲ್ಲ ನನಗೆ ಅವರ ಪರಿಚಯ ಇಲ್ಲ ಎನ್ನುತ್ತಾರೆ.

2 ದಿನದ ಪೊಲೀಸರು ಅಂಗಡಿಗೆ ಬಂದರು. ಮಹಜರ್ ನ್ನು ಬರೆದರು. ನಾನು ಮತ್ತು ಅಂಗಡಿಯವರು ವಂಹಜರ್‌ಗೆ ಸಹಿ ಮಾಡಿದ್ದೇವೆ. ಅದರಲ್ಲಿ ಬರೆದಿರುವ ವಿಚಾರ ಗೊತ್ತು. ಸಿ. ಸಿ. ಕ್ಯಾಮೆರಾದಲ್ಲಿ ಹಣವನ್ನು ತೆಗೆದುಕೊಳ್ಳುವುದು ಕಾಣುತ್ತಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನಮ್ಮ ಅಂಗಡಿಯಲ್ಲಿ ಯಾವುದೇ ಹಣ, ವಸ್ತು ಕಳ್ಳತನ ಮಾಡಿಲ್ಲ ಎಂದರೆ ಸರಿ. ನಮ್ಮ ಅಂಗಡಿಯವರೇ ಹಣವನ್ನು ತೆಗೆದುಕೊಂಡು ಆರೋಪಿ ವಿರುದ್ಧ ಸುಳ್ಳು ಆರೋಪ ಮಾಡಿದ್ದೇವೆ ಎಂದರೆ ಸರಿಯಲ್ಲ. ಆದ ಕಾರಣ ಅಂಗಡಿಯ ಯಾವುದೇ ಬೀಗಗಳನ್ನು ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮು. ಮಾ ಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಬೀಗದ ಕೀ ನನ್ನ ಬಳಿ ಇದ್ದ ಕಾರಣ ಹಣ ಏನಾಯಿತು ಎಂದು ನನಗೆ ಮಾತ್ರ ತಿಳಿಯಿತು ಎಂದರೆ ಸರಿಯಲ್ಲ. ಹಣದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಸಿಡಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)